# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1351 |
| ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಗೋಹತ್ಯೆ, ಗೋಹಿಂಸೆ ಮತ್ತು ಅಕ್ರಮ ಗೋಸಾಗಣಿಕೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಕಳೆದ 2 ವರ್ಷದಿಂದ ಎಷ್ಟು ಗೋಹತ್ಯೆ, ಗೋಹಿಂಸೆ ಮತ್ತು ಅಕ್ರಮ ಗೋಸಾಗಣಿಕೆ ಪ್ರಕರಣಗಳು ದಾಖಲಾಗಿವೆ;</td><td>ರಾಜ್ಯದಲ್ಲಿ ಕಳೆದ 02 ವರ್ಷದಿಂದ ಗೋಹತ್ಯೆ, ಗೋಹಿಂಸೆ ಮತ್ತು ಅಕ್ರಮ ಸಾಗಣಿಕೆಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ:-
<table>
<tr><th>ಕ್ರ.ಸಂ.</th><th>ವರ್ಷ</th><th>ಗೋಹತ್ಯೆ</th><th>ಗೋಹಿಂಸೆ</th><th>ಅಕ್ರಮ ಗೋ ಸಾಗಣಿಕೆ</th></tr>
<tr><td>01</td><td>2023</td><td>112</td><td>47</td><td>347</td></tr>
<tr><td>02</td><td>2024</td><td>134</td><td>70</td><td>381</td></tr>
<tr><td>03</td><td>2025</td><td>22</td><td>11</td><td>61</td></tr>
</table>
ಜಿಲ್ಲಾವಾರು ಅಂಕಿ ಅಂಶಗಳ ವಿವರವನ್ನು ಅನುಬಂಧ-ಅ ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಈ ಪ್ರಕರಣಗಳಲ್ಲಿ ಎಷ್ಟು ಜನರನ್ನು ಬಂಧಿಸಲಾಗಿದೆ; ಎಷ್ಟು ಜನರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿವೆ; (ಪ್ರಕರಣವಾರು ವಿವರ ನೀಡುವುದು)</td><td>ಈ ಪ್ರಕರಣಗಳಲ್ಲಿ ಬಂಧಿಸಲಾದ ಮತ್ತು ಕ್ರಿಮಿನಲ್ ಪ್ರಕರಣ ದಾಖಲಿಸಿದ ಬಗ್ಗೆ ಅಂಕಿ ಅಂಶಗಳ ವಿವರ ಈ ಕೆಳಕಂಡಂತಿರುತ್ತದೆ:-
<table>
<tr><th>ವರ್ಷ</th><th>ದಾಖಲಾದ ಪ್ರಕರಣಗಳಲ್ಲಿ ಬಂಧಿಸಲಾದ ಜನರ ಸಂಖ್ಯೆ</th><th>ಕ್ರಿಮಿನಲ್ ಪ್ರಕರಣ ದಾಖಲಾದ ಜನರ ಸಂಖ್ಯೆ</th></tr>
<tr><td>2023</td><td>1024</td><td>906</td></tr>
<tr><td>2024</td><td>1033</td><td>928</td></tr>
<tr><td>2025</td><td>154</td><td>135</td></tr>
</table>
ಪ್ರಕರಣಗಳ ಜಿಲ್ಲಾವಾರು ಅಂಕಿ ಅಂಶಗಳ ವಿವರವನ್ನು ಅನುಬಂಧ-ಬ ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ಕಳೆದ 2 ವರ್ಷದಿಂದ ಗೋಹತ್ಯೆ, ಗೋಹಿಂಸೆ ಮತ್ತು ಗೋಸಾಗಣಿಕೆ ಪ್ರಕರಣಗಳನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ಒದಗಿಸುವುದು)</td><td>ಸರ್ಕಾರದಿಂದ ಕೆಳಕಂಡ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-<br>
1) ಗೋವುಗಳ ಅಕ್ರಮ ಸಾಗಾಟ, ಗೋಹತ್ಯೆ ಹಾಗೂ ಗೋಮಾಂಸ ಮಾರಾಟವನ್ನು ತಡೆಗಟ್ಟುವ ನಿಟ್ಟಿನಲ್ಲಿ ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿರುತ್ತದೆ ಹಾಗೂ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ.<br>
2) ಚೆಕ್‌ಪೋಸ್ಟ್‌ಗಳಲ್ಲಿ ಸರದಿಯಂತೆ ಸಿಬ್ಬಂದಿಯವರನ್ನು ನೇಮಿಸಿ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ.<br>
3) ರಾಜ್ಯದ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಗೋವುಗಳ ಅಕ್ರಮ ಸಾಗಾಟ, ಗೋಹತ್ಯೆ ಹಾಗೂ ಗೋಮಾಂಸ ಮಾರಾಟವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಲಾಗಿರುತ್ತದೆ.<br>
4) ಬೀಟ್ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಮಾಹಿತಿ ಸಂಗ್ರಹಿಸುವ ಕುರಿತು ಸೂಕ್ತ ನಿರ್ದೇಶನಗಳನ್ನು ನೀಡಲಾಗಿರುತ್ತದೆ.<br>
5) ಆಯಕಟ್ಟಿನ ಸ್ಥಳಗಳಲ್ಲಿ ಸಿ.ಸಿ.ಕ್ಯಾಮರಾ ಅಳವಡಿಸಿ ಪರಿಶೀಲಿಸಲಾಗುತ್ತಿದೆ.</td></tr>
</table>

<table>
<tr>
<td>ಈ</td>
<td>ಇತ್ತೀಚೆಗೆ ರಾಜ್ಯದ ಹಲವೆಡೆ ಹಸುವನ್ನು ಕಡಿದು ಗರ್ಭದಿಂದ ಕರು ತೆಗೆದು ಬಿಸಾಡಿ ಮಾಂಸ ಹೊತ್ತೊಯ್ದಿರುವುದು ಹಾಗೂ ಹಸುಗಳ ಕೆಚ್ಚಲು ಕೊಯ್ದು ಅಮಾನವೀಯ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಎಷ್ಟು ಜನರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಇವರ ವಿರುದ್ಧ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳದೆ ಇರಲು ಕಾರಣವೇನು;</td>
<td>ಇತ್ತೀಚೆಗೆ ರಾಜ್ಯದ ಹಲವೆಡೆ ಹಸುವನ್ನು ಕಡಿದು ಗರ್ಭದಿಂದ ಕರು ತೆಗೆದು ಬಿಸಾಡಿ ಮಾಂಸ ಹೊತ್ತೊಯ್ದಿರುವುದು ಹಾಗೂ ಹಸುಗಳ ಕೆಚ್ಚಲು ಕೊಯ್ದು ಅಮಾನವೀಯ ಘಟನೆಗೆ ಸಂಬಂಧಪಟ್ಟಂತೆ ದಾಖಲಾದ ಪ್ರಕರಣಗಳ ವಿವರ ಕೆಳಗಿನಂತಿದೆ:-
<table>
<tr><th>ಕ್ರ.ಸಂ.</th><th>ಘಟಕ</th><th>2025ನೇ ಸಾಲಿನಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ</th></tr>
<tr><td>01</td><td>ಬೆಂಗಳೂರು ನಗರ</td><td>1</td></tr>
<tr><td>02</td><td>ಉತ್ತರ ಕನ್ನಡ</td><td>1</td></tr>
<tr><td></td><td>ಒಟ್ಟು</td><td>2</td></tr>
</table>
1. ಹಸುವಿನ ಕೆಚ್ಚಲು ಕೊಯ್ದು ಅಮಾನವೀಯ ಕೃತ್ಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರದ ಕಾಟನ್‌ಪೇಟೆ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ: 04/2025 ಕಲಂ 11(1)(3) ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ & 325 ಬಿ.ಎನ್.ಎಸ್. ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ದಿನಾಂಕ:12.01.2025 ರಂದು ಆರೋಪಿಯಾದ ಶೇಖ್ ನಸ್ರೂದ್ದೀನ್ ಬಿನ್ ತುಜಾರ, ಬಿಹಾರ ಈತನನ್ನು ಬಂಧಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಆದೇಶವಾಗಿರುತ್ತದೆ. ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗುವುದು.<br><br>
2. ಗರ್ಭಾವಸ್ಥೆಯಲ್ಲಿದ್ದ ಆಕಳಿನ ಕರುವಿನ ಭ್ರೂಣವನ್ನು ರಸ್ತೆಯಲ್ಲಿಯೇ ಬಿಟ್ಟು ಮಾಂಸವನ್ನು ತೆಗೆದುಕೊಂಡು ಹೋದ ಬಗ್ಗೆ ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ಪೊಲೀಸ ಠಾಣಾ 09/2025 ಕಲಂ: 4, 12 The Karnataka Prevention Of Slaughter And Preservation Of Cattle Act, 2020 ಹಾಗೂ ಕಲಂ: 325. 303(2) ಭಾರತೀಯ ನ್ಯಾಯ ಸಂಹಿತೆ-2023 ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಪ್ರಕರಣದಲ್ಲಿನ 04 ಜನರನ್ನು ಪತ್ತೆ ಹಚ್ಚಿ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಸದರಿ 04 ಜನ ಆರೋಪಿತರು ಜಿಲ್ಲಾ ಕಾರಾಗೃಹ, ಕಾರವಾರದಲ್ಲಿ ಇರಿಸಲಾಗಿದೆ.</td>
</tr>
<tr>
<td>ಉ</td>
<td>ಗೋಹತ್ಯೆ, ಅಕ್ರಮ ಗೋಸಾಗಣಿಕೆ ಮತ್ತು ಗೋಹಿಂಸೆ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?</td>
<td>ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/261/ಸಲೆವಿ/2015, ದಿನಾಂಕ: 14.08.2021ರಲ್ಲಿ ರಾಜ್ಯಾದ್ಯಂತ ಬಕ್ರೀದ್ ಮುಂತಾದ ಹಬ್ಬದ ದಿನಗಳಲ್ಲಿ ಅಕ್ರಮ ಒಂಟೆ/ಗೋವುಗಳ ಹತ್ಯೆಯನ್ನು ತಡೆಗಟ್ಟಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ.<br><br>
ಅಲ್ಲದೆ, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪ್ರಾಣಿ ದಯಾ ಸಂಘವು ಕಾರ್ಯನಿರ್ವಹಿಸುತ್ತಿದ್ದು, ಈ ಸಂಘದಲ್ಲಿ ಜಿಲ್ಲಾ ಪೊಲೀಸ್ ಆಯುಕ್ತರು/ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಅಪರ ಜಿಲ್ಲಾಧಿಕಾರಿ, ಜಿಲ್ಲಾ ಸಾರಿಗೆ ಅಧಿಕಾರಿ ಹಾಗೂ ಗೋಶಾಲೆಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿ ವತಿಯಿಂದ ಗೋಹತ್ಯೆ ಹಾಗೂ ಗೋವುಗಳ ಅಕ್ರಮ ಸಾಗಣಿಕೆಯನ್ನು ತಡೆಯಲು ಕ್ರಮವಹಿಸಲಾಗುತ್ತಿದೆ.<br><br>
ಗೋಹತ್ಯೆ, ಅಕ್ರಮ ಗೋಸಾಗಣಿಕೆ ಮತ್ತು ಗೋಹಿಂಸೆ ಪ್ರಕರಣಗಳು ಮರುಕಳಿಸದಂತೆ ಕೈಗೊಂಡ ಕ್ರಮದ ಮಾಹಿತಿ ಕೆಳಗಿನಂತಿದೆ:-<br>
• ಗೋಹತ್ಯೆ ಹಾಗೂ ಗೋವುಗಳ ಅಕ್ರಮ ಸಾಗಣಿಕೆಯನ್ನು ತಡೆಯಲು ಘಟಕಗಳಲ್ಲಿ</td>
</tr>
</table>

| | | |
|---|---|---|
| | | ಹಾಲಿ ಇರುವ ಅಧಿಕಾರಿ / ಸಿಬ್ಬಂದಿಗಳನ್ನು ಸಮರ್ಪಕವಾಗಿ ಬಳಸಿಕೊಂಡು ಚೆಕ್‌ಪೋಸ್ಟ್ ಮತ್ತು ನಾಕಾಬಂದಿ ಕರ್ತವ್ಯದ ವೇಳೆಯಲ್ಲಿ ಎಲ್ಲಾ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ.<br>• ರಾತ್ರಿ ವೇಳೆಯಲ್ಲಿ ಸಂಚರಿಸುವ ವಾಹನಗಳನ್ನು ತಪ್ಪದೇ ಪರಿಶೀಲಿಸುವಂತೆ ರಾತ್ರಿ ಗಸ್ತಿನ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿದ್ದು, ಗೋವು ಸಾಗಣಿಕೆ ಕಂಡು ಬಂದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತಿದೆ. |

ಸಂಖ್ಯೆ: 150 ಎಸ್‌ಎಸ್‌ಟಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

| ಅನುಬಂಧ-ಅ | | | | | | | | | | |
|---|---|---|---|---|---|---|---|---|---|---|
| ಕ್ರಸಂ | ಘಟಕ | ದಾಖಲಾದ ಪ್ರಕರಣಗಳ ಸಂಖ್ಯೆ | | | | | | | | |
| | | ಗೋಹತ್ಯೆ | | | ಗೋಹಿಂಸೆ | | | ಗೋವುಗಳ ಅಕ್ರಮ ಸಾಗಾಣಿಕೆ | | |
| | | 2023 | 2024 | 2025 | 2023 | 2024 | 2025 | 2023 | 2024 | 2025 |
| 1 | ಬೆಂಗಳೂರು ನಗರ | 9 | 4 | 1 | 1 | 5 | 1 | 20 | 12 | 0 |
| 2 | ಮೈಸೂರು ನಗರ | 0 | 0 | 0 | 8 | 5 | 0 | 10 | 8 | 2 |
| 3 | ಹುಬ್ಬಳ್ಳಿ-ಧಾರವಾಡ ನಗರ | 0 | 0 | 0 | 1 | 0 | 1 | 2 | 2 | 0 |
| 4 | ಮಂಗಳೂರು ನಗರ | 5 | 9 | 0 | 1 | 4 | 0 | 7 | 9 | 4 |
| 5 | ಬೆಳಗಾವಿ ನಗರ | 0 | 0 | 0 | 0 | 0 | 0 | 0 | 2 | 0 |
| 6 | ಕಲಬುರಗಿ ನಗರ | 1 | 2 | 0 | 0 | 0 | 0 | 4 | 1 | 0 |
| 7 | ಬೆಂಗಳೂರು ಜಿಲ್ಲೆ | 0 | 0 | 1 | 0 | 0 | 0 | 6 | 8 | 1 |
| 8 | ತುಮಕೂರು ಜಿಲ್ಲೆ | 0 | 0 | 0 | 0 | 0 | 0 | 23 | 33 | 2 |
| 9 | ಕೋಲಾರ ಜಿಲ್ಲೆ | 0 | 0 | 0 | 0 | 1 | 0 | 2 | 0 | 0 |
| 10 | ರಾಮನಗರ ಜಿಲ್ಲೆ | 3 | 0 | 0 | 0 | 0 | 0 | 20 | 16 | 1 |
| 11 | ಚಿಕ್ಕಬಳ್ಳಾಪುರ ಜಿಲ್ಲೆ | 14 | 20 | 3 | 0 | 0 | 0 | 10 | 19 | 3 |
| 12 | ಕೆ.ಜಿ.ಎಫ್. | 0 | 0 | 1 | 0 | 0 | 0 | 1 | 0 | 1 |
| 13 | ಮೈಸೂರು ಜಿಲ್ಲೆ | 0 | 0 | 0 | 0 | 0 | 0 | 21 | 14 | 2 |
| 14 | ಮಂಡ್ಯ ಜಿಲ್ಲೆ | 0 | 0 | 0 | 0 | 0 | 0 | 29 | 26 | 3 |
| 15 | ಹಾಸನ ಜಿಲ್ಲೆ | 13 | 9 | 2 | 2 | 2 | 0 | 24 | 26 | 6 |
| 16 | ಕೊಡಗು ಜಿಲ್ಲೆ | 0 | 0 | 0 | 1 | 0 | 0 | 9 | 6 | 1 |
| 17 | ಚಾಮರಾಜನಗರ ಜಿಲ್ಲೆ | 0 | 0 | 0 | 0 | 0 | 0 | 17 | 14 | 4 |
| 18 | ಬೆಳಗಾವಿ ಜಿಲ್ಲೆ | 0 | 1 | 0 | 0 | 1 | 0 | 5 | 6 | 4 |
| 19 | ವಿಜಯಪುರ ಜಿಲ್ಲೆ | 1 | 1 | 0 | 0 | 0 | 0 | 9 | 10 | 1 |
| 20 | ಧಾರವಾಡ ಜಿಲ್ಲೆ | 0 | 0 | 0 | 1 | 0 | 1 | 1 | 2 | 2 |
| 21 | ಬಾಗಲಕೋಟೆ ಜಿಲ್ಲೆ | 4 | 2 | 0 | 0 | 6 | 1 | 4 | 6 | 0 |
| 22 | ಗದಗ ಜಿಲ್ಲೆ | 0 | 0 | 0 | 0 | 0 | 0 | 1 | 1 | 0 |
| 23 | ಚಿತ್ರದುರ್ಗ ಜಿಲ್ಲೆ | 1 | 0 | 0 | 0 | 0 | 0 | 5 | 3 | 1 |
| 24 | ಹಾವೇರಿ ಜಿಲ್ಲೆ | 0 | 0 | 2 | 2 | 6 | 0 | 1 | 7 | 0 |
| 25 | ಶಿವಮೊಗ್ಗ ಜಿಲ್ಲೆ | 37 | 48 | 4 | 12 | 28 | 3 | 13 | 25 | 6 |
| 26 | ದಾವಣಗೆರೆ ಜಿಲ್ಲೆ | 0 | 0 | 0 | 0 | 0 | 0 | 5 | 5 | 2 |
| 27 | ದಕ್ಷಿಣ ಕನ್ನಡ ಜಿಲ್ಲೆ | 6 | 9 | 2 | 0 | 0 | 0 | 20 | 14 | 4 |
| 28 | ಉತ್ತರ ಕನ್ನಡ ಜಿಲ್ಲೆ | 3 | 2 | 1 | 11 | 1 | 3 | 26 | 40 | 1 |
| 29 | ಚಿಕ್ಕಮಗಳೂರು ಜಿಲ್ಲೆ | 9 | 21 | 2 | 0 | 0 | 0 | 7 | 16 | 2 |
| 30 | ಉಡುಪಿ ಜಿಲ್ಲೆ | 2 | 6 | 3 | 0 | 0 | 1 | 14 | 13 | 4 |
| 31 | ಬಳ್ಳಾರಿ ಜಿಲ್ಲೆ | 0 | 0 | 0 | 2 | 2 | 0 | 1 | 2 | 0 |
| 32 | ಕಲಬುರಗಿ ಜಿಲ್ಲೆ | 0 | 0 | 0 | 0 | 0 | 0 | 12 | 12 | 2 |
| 33 | ಬೀದರ್ ಜಿಲ್ಲೆ | 0 | 0 | 0 | 0 | 0 | 0 | 7 | 4 | 0 |
| 34 | ರಾಯಚೂರು ಜಿಲ್ಲೆ | 0 | 0 | 0 | 0 | 0 | 0 | 2 | 2 | 1 |
| 35 | ಕೊಪ್ಪಳ ಜಿಲ್ಲೆ | 2 | 0 | 0 | 5 | 9 | 0 | 1 | 3 | 0 |
| 36 | ಯಾದಗಿರಿ ಜಿಲ್ಲೆ | 2 | 0 | 0 | 0 | 0 | 0 | 7 | 12 | 1 |
| 37 | ವಿಜಯನಗರ ಜಿಲ್ಲೆ | 0 | 0 | 0 | 0 | 0 | 0 | 1 | 2 | 0 |
| ಒಟ್ಟು | | **112** | **134** | **22** | **47** | **70** | **11** | **347** | **381** | **61** |

| ಅನುಬಂಧ -- ಬ | | | | | | | |
|---|---|---|---|---|---|---|---|
| ಕ್ರ.ಸ | ಘಟಕ | ಬಂಧಿಸಲಾದವರ ಸಂಖ್ಯೆ | | | ಕ್ರಿಮಿನಲ್ ಪ್ರಕರಣ ದಾಖಲಿಸಲಾದವರ ಸಂಖ್ಯೆ | | |
| | | 2023 | 2024 | 2025 | 2023 | 2024 | 2025 |
| 1 | ಬೆಂಗಳೂರು ನಗರ | 65 | 54 | 4 | 39 | 22 | 2 |
| 2 | ಮೈಸೂರು ನಗರ | 31 | 26 | 2 | 32 | 26 | 2 |
| 3 | ಹುಬ್ಬಳ್ಳಿ-ಧಾರವಾಡ ನಗರ | 4 | 4 | 1 | 4 | 4 | 1 |
| 4 | ಮಂಗಳೂರು ನಗರ | 29 | 63 | 8 | 31 | 65 | 8 |
| 5 | ಬೆಳಗಾವಿ ನಗರ | 0 | 5 | 0 | 0 | 2 | 0 |
| 6 | ಕಲಬುರಗಿ ನಗರ | 16 | 2 | 0 | 7 | 2 | 0 |
| 7 | ಬೆಂಗಳೂರು ಜಿಲ್ಲೆ | 8 | 10 | 2 | 8 | 10 | 2 |
| 8 | ತುಮಕೂರು ಜಿಲ್ಲೆ | 54 | 64 | 5 | 54 | 64 | 2 |
| 9 | ಕೋಲಾರ ಜಿಲ್ಲೆ | 4 | 0 | 0 | 5 | 0 | 0 |
| 10 | ರಾಮನಗರ ಜಿಲ್ಲೆ | 44 | 21 | 0 | 50 | 28 | 0 |
| 11 | ಚಿಕ್ಕಬಳ್ಳಾಪುರ ಜಿಲ್ಲೆ | 22 | 7 | 0 | 24 | 39 | 6 |
| 12 | ಕೆ.ಜಿ.ಎಫ್. | 1 | 0 | 1 | 1 | 0 | 1 |
| 13 | ಮೈಸೂರು ಜಿಲ್ಲೆ | 43 | 24 | 4 | 21 | 14 | 2 |
| 14 | ಮಂಡ್ಯ ಜಿಲ್ಲೆ | 66 | 43 | 7 | 66 | 43 | 7 |
| 15 | ಹಾಸನ ಜಿಲ್ಲೆ | 87 | 43 | 19 | 97 | 47 | 18 |
| 16 | ಕೊಡಗು ಜಿಲ್ಲೆ | 1 | 0 | 0 | 1 | 0 | 0 |
| 17 | ಚಾಮರಾಜನಗರ ಜಿಲ್ಲೆ | 30 | 56 | 6 | 17 | 14 | 4 |
| 18 | ಬೆಳಗಾವಿ ಜಿಲ್ಲೆ | 8 | 10 | 8 | 8 | 15 | 8 |
| 19 | ವಿಜಯಪುರ ಜಿಲ್ಲೆ | 24 | 29 | 5 | 24 | 29 | 5 |
| 20 | ಧಾರವಾಡ ಜಿಲ್ಲೆ | 4 | 4 | 1 | 4 | 4 | 1 |
| 21 | ಬಾಗಲಕೋಟೆ ಜಿಲ್ಲೆ | 26 | 33 | 2 | 14 | 23 | 1 |
| 22 | ಗದಗ ಜಿಲ್ಲೆ | 2 | 2 | 0 | 1 | 1 | 0 |
| 23 | ಚಿತ್ರದುರ್ಗ ಜಿಲ್ಲೆ | 10 | 3 | 1 | 10 | 3 | 1 |
| 24 | ಹಾವೇರಿ ಜಿಲ್ಲೆ | 3 | 13 | 14 | 3 | 13 | 2 |
| 25 | ಶಿವಮೊಗ್ಗ ಜಿಲ್ಲೆ | 94 | 116 | 13 | 62 | 105 | 13 |
| 26 | ದಾವಣಗೆರೆ ಜಿಲ್ಲೆ | 9 | 16 | 3 | 4 | 5 | 2 |
| 27 | ದಕ್ಷಿಣ ಕನ್ನಡ ಜಿಲ್ಲೆ | 68 | 52 | 8 | 68 | 52 | 8 |
| 28 | ಉತ್ತರ ಕನ್ನಡ ಜಿಲ್ಲೆ | 97 | 126 | 13 | 97 | 126 | 13 |
| 29 | ಚಿಕ್ಕಮಗಳೂರು ಜಿಲ್ಲೆ | 37 | 80 | 11 | 16 | 37 | 4 |
| 30 | ಉಡುಪಿ ಜಿಲ್ಲೆ | 37 | 22 | 10 | 37 | 30 | 10 |
| 31 | ಬಳ್ಳಾರಿ ಜಿಲ್ಲೆ | 8 | 7 | 0 | 8 | 7 | 0 |
| 32 | ಕಲಬುರಗಿ ಜಿಲ್ಲೆ | 23 | 31 | 3 | 23 | 31 | 3 |
| 33 | ಬೀದರ್ ಜಿಲ್ಲೆ | 15 | 10 | 0 | 15 | 10 | 0 |
| 34 | ರಾಯಚೂರು ಜಿಲ್ಲೆ | 3 | 5 | 3 | 3 | 5 | 3 |
| 35 | ಕೊಪ್ಪಳ ಜಿಲ್ಲೆ | 26 | 25 | 0 | 26 | 25 | 0 |
| 36 | ಯಾದಗಿರಿ ಜಿಲ್ಲೆ | 22 | 22 | 0 | 23 | 22 | 6 |
| 37 | ವಿಜಯನಗರ ಜಿಲ್ಲೆ | 3 | 5 | 0 | 3 | 5 | 0 |
| | ಒಟ್ಟು | 1024 | 1033 | 154 | 906 | 928 | 135 |